ಗಜೇಂದ್ರ ಗುಂಜೂರ್

ಜೀವನ ಎಂಬುದು ಜಾತ್ರೆಯಲ್ಲಿ ಹೂಡುವ ರಂಕಲ್ ರಾಟೆ ಆಟದಂತೆ – ಮೇಲಿದ್ದವರು ಕೆಳಗೆ ಹೋಗುತ್ತಾರೆ, ಕೆಳಗಿದ್ದವರು ಮೇಲೆ ಬರುತ್ತಾರೆ. ನಾಳೆ ನಮ್ಮದು ಎಂಬ ನಂಬಿಕೆಯೊಂದಿಗೆ ಈ ದಿನದ ಇರುಳಲ್ಲಿ ಭವಿಷ್ಯದ ಕನಸುಗಳನ್ನು ಹೊಸೆಯುತ್ತ ರಾಟೆ ಆಟ ಆಡುತ್ತಿರುತ್ತೇವೆ. ಇದು ಎಲ್ಲರ ಬದುಕಿಗೂ ಅನ್ವಯಿಸುತ್ತದೆ.

ಅಂದ ಹಾಗೆ ನಾನೊಬ್ಬ ಕಥಾಲೇಖಕ... ಒಬ್ಬಳೇ ಹೆಂಡತಿ, ಇಬ್ಬರು ಮಕ್ಕಳು ನನ್ನ ಆಸ್ತಿ. ಪರಿಮಿತಗಳ ನನ್ನ ಬದುಕಿನ ಪಯಣ ಸಾಗಿತ್ತು.

ಪ್ರಸ್ತುತ, ತೆಲುಗಿನ ನಿರ್ಮಾಪಕ ನಿರ್ಮಿಸಿದ ಧಾರಾವಾಹಿಯೊಂದಕ್ಕೆ ಕತೆ–ಸಂಭಾಷಣೆ ಬರೆಯುತ್ತಿದ್ದೆ. ಅದು ಕನ್ನಡದ ವಾಹಿನಿಯೊಂದರಲ್ಲಿ ಮುಕ್ತಾಯಗೊಂಡು ಎರಡು ತಿಂಗಳಾಗಿತ್ತು. ಆ ಪ್ರಾಜೆಕ್ಟ್‌ನಲ್ಲಿ ಎರಡು ವರ್ಷದಿಂದ ಕೆಲಸ ಮಾಡಿ ಆ ತಂಡದೊಂದಿಗೆ ಒಂದು ರೀತಿಯ ಸಂಬಂಧ ಬೆಳೆದಿತ್ತು. ಪ್ರಾಜೆಕ್ಟ್ ಮುಕ್ತಾಯದ ದಿನ ಜೊತೆಗೆ ಕೆಲಸ ಮಾಡಿದವರನ್ನು ಬೇಸರದಿಂದಲೇ ಬೀಳ್ಕೊಟ್ಟಿದ್ದೆವು. ದುಡಿಯುವ ವರ್ಗದವರೆಲ್ಲ ಇಲ್ಲಿನವರು, ಹಣ ಹೂಡಿ ಲಾಭ ಮಾಡುವ ಧಣಿ ನಮ್ಮ ಪಕ್ಕದ ರಾಜ್ಯದವ. ಆ ಧಾರಾವಾಹಿಯ ನಿರ್ಮಾಪಕ ಪ್ರತಿಷ್ಠಿತ ಬ್ಯಾನರ್ ಒಂದರ ಯಜಮಾನ. ಆತ ಆರು ತಿಂಗಳಿಗೋ ವರ್ಷಕ್ಕೋ ಇಲ್ಲಿಗೆ ಬರುತ್ತಿದ್ದ. ಅಲ್ಲಿಂದ ಕಂಪನಿಯ ಪರವಾಗಿ ಬಂದು ಇಲ್ಲಿ ಕೆಲಸ ಮಾಡುತ್ತಿದ್ದವರು ಕ್ಯಾಷಿಯರ್, ಅವನ ಸಹಾಯಕ, ಆಫೀಸ್‌ಬಾಯ್. ಇಷ್ಟೇ ಅವರ ಸ್ಟಾಫ್. ಅವರೆಲ್ಲರೂ ತಮ್ಮ ತಮ್ಮ ಲಗೇಜ್‌ಗಳನ್ನು ಹೆಗಲಿಗೇರಿಸಿಕೊಂಡು ಆಫೀಸ್ ಖಾಲಿ ಮಾಡಿ ಹೊರಟುಹೋಗಿದ್ದರು.

ಕೆಲಸ ಮುಗಿಯಿತೆಂದು ಕೂರುವಂತಿಲ್ಲ, ಬೇರೆ ಪ್ರಾಜೆಕ್ಟ್‌ನ ಹುಡುಕಾಟ, ಬೇರೆ ಬೇರೆ ವಾಹಿನಿಗಳಲ್ಲಿ ಅವಕಾಶಕ್ಕಾಗಿ ತಲಾಶ್ ನಡೆದಿತ್ತು. ಪ್ರಾಜೆಕ್ಟ್ ಓಕೆ ಅನಿಸಿದರೆ ಸಂಭಾವನೆ ಹೊಂದಿಕೆಯಾಗುತ್ತಿರಲಿಲ್ಲ. ಸಂಭಾವನೆ ಸರಿಯಾಗಿದ್ದರೆ ಹೊಸ ಕಂಪನಿಗಳು ಹಾಗೂ ಚಾನಲ್‌ಗಳಿಂದ ಒಪ್ಪಿಕೊಂಡ ಕೂಲಿ ಸಿಗುತ್ತದೋ ಇಲ್ಲವೋ ಖಾತ್ರಿ ಇರಲಿಲ್ಲ. ಈ ಗೊಂದಲದಲ್ಲೇ ನಿರುದ್ಯೋಗಿಯಾಗಿ ಎರಡು ತಿಂಗಳಾಗಿತ್ತು. ಅನಿಶ್ಚಿತ ಉದ್ಯೋಗ ತನ್ನ ಅಸಲಿ ಮುಖವನ್ನು ಕ್ರಮೇಣ ತೋರಿಸಲು ಶುರುಮಾಡಿತ್ತು. ಮನೆ ಬಾಡಿಗೆ ಕೊಡುವ ಅವಧಿ ಮುಗಿದು ಐದಾರು ದಿನವಾಗಿತ್ತು. ಕೆಲಸವಿದ್ದಾಗ ವಾರ

